# ‘ಹೌದಪ್ಪ’ಗಳ ವಿರುದ್ಧ ಹೌಗನ್ ಗುಡುಗು



ಕೆಲವು ವಾರಗಳ ಹಿಂದೆ ಫೇಸ್‌ಬುಕ್‌ನ ನೂರಾರು ಕೋಟಿ ಬಳಕೆದಾರರಿಗೆ ಸರಿಸುಮಾರು ಆರು ಗಂಟೆಗಳವರೆಗೆ ಆ ಸಾಮಾಜಿಕ ಜಾಲತಾಣವನ್ನು ಬಳಸಲು ಸಾಧ್ಯವಾಗಲೇ ಇಲ್ಲ. ಇಷ್ಟೊಂದು ದೊಡ್ಡ ತಾಂತ್ರಿಕ ಸಮಸ್ಯೆ ಎದುರಾದರೂ ಆಗ ಫೇಸ್‌ಬುಕ್ ಅಷ್ಟೊಂದು ಜನಾಕ್ರೋಶಕ್ಕೆ ತುತ್ತಾಗಿರಲಿಲ್ಲ. ಆದರೆ, ಈಚೆಗೆ ‘ವಿಷಲ್ ಬ್ಲೋವರ್’ (ವ್ಯವಸ್ಥೆಯೊಳಗಿನ ಹುಳುಕುಗಳ ವಿರುದ್ಧ ಮೊದಲ ಧ್ವನಿ ಎತ್ತುವವರು) ಫ್ರಾನ್ಸಿಸ್ ಹೌಗನ್ ಹೊರಹಾಕಿದ ‘ಸ್ಫೋಟಕ’ ಮಾಹಿತಿ ಮಾತ್ರ ಫೇಸ್‌ಬುಕ್ ಅನ್ನು ಮಾಗಿಕಾಲದ ಚಳಿಯಂತೆ ಗಡಗಡ ನಡುಗಿಸಿಬಿಟ್ಟಿತು. ತೀವ್ರ ಜನಾಕ್ರೋಶಕ್ಕೂ ಅದು ತುತ್ತಾಗಬೇಕಾಯಿತು.

ಫ್ರಾನ್ಸಿಸ್ ಹೌಗನ್ ಕೊಟ್ಟ ದಾಖಲೆಗಳ ಆಧಾರದ ಮೇಲೆ ಪ್ರಕಟವಾಗಿದ್ದ ‘ದಿ ವಾಲ್ ಸ್ಟ್ರೀಟ್ ಜರ್ನಲ್’ನ ಸರಣಿ ವರದಿಗಳು ಮಾಡಿದ ಸದ್ದು ಹಾಗಿತ್ತು. ಮೊದಲು ಈ ದಾಖಲೆಗಳನ್ನು ಕೊಟ್ಟವರು ಯಾರು ಎನ್ನುವ ಮಾಹಿತಿ ಗೋಪ್ಯವಾಗಿತ್ತು. ಆದರೆ, ಸ್ವತಃ ಹೌಗನ್ ‘ಆ ಮಾಹಿತಿ ಕೊಟ್ಟವರುವುದು ನಾನೇ’ ಎಂದು ಟಿ.ವಿ. ಸಂದರ್ಶನದಲ್ಲಿ ತಮ್ಮ ಗುರುತನ್ನು ಬಹಿರಂಗಪಡಿಸಿದ್ದಳು.

ಫೇಸ್‌ಬುಕ್ ಮತ್ತು ಅದರ ಇತರ ಸಾಮಾಜಿಕ ವೇದಿಕೆಗಳು ಸುಳ್ಳು ಸುದ್ದಿ ಹರಡಲು, ದ್ವೇಷವನ್ನು ಬಿತ್ತಲು ಮತ್ತು ಗಲಭೆಯನ್ನು ಪ್ರಚೋದಿಸಲು ಬಳಕೆಯಾಗುತ್ತಿವೆ ಎನ್ನುವ ವಾಸ್ತವ ಕಂಪನಿಗೆ ಚೆನ್ನಾಗಿ ಗೊತ್ತಿದೆ. ಆದರೆ, ಅದನ್ನು ತಡೆಯಲು ಏನೂ ಮಾಡುತ್ತಿಲ್ಲ ಎಂದು ಹೌಗನ್ ಆರೋಪಿಸಿದ್ದಳು. ತಮ್ಮ ಆರೋಪಕ್ಕೆ ಪೂರಕವಾದ ದಾಖಲೆಗಳನ್ನೂ ‘ದಿ ವಾಲ್ ಸ್ಟ್ರೀಟ್ ಜರ್ನಲ್’ಗೆ ಒದಗಿಸಿದ್ದಳು.

‘ಫೇಸ್‌ಬುಕ್, ತನ್ನ ವೇದಿಕೆಗಳಲ್ಲಿ ದ್ವೇಷದ ಮಾತುಗಳು ಹರಡದಂತೆ ನೋಡಿಕೊಳ್ಳಲು ವಿಫಲವಾಗಿದೆ, ಬಳಕೆದಾರರ ದತ್ತಾಂಶಗಳು ಸೋರಿಕೆ ಆಗದಂತೆ ಕಾಪಾಡುವಲ್ಲಿಯೂ ಸೋತಿದೆ ಎಂಬ ಆರೋಪಗಳು ಕೇಳಿ ಬರುತ್ತಿರುವಾಗಲೇ ಹೌಗನ್ ಈ ಸ್ಫೋಟಕ ಸುದ್ದಿ ಸಿಡಿಸಿದ್ದಾಳೆ. ಅದೀಗ ಜಗತ್ತಿನ ಎಲ್ಲ ಕಡೆಗಳಲ್ಲಿ ಭಾರಿ ಸದ್ದು ಮಾಡುತ್ತಿದೆ.

ಹೌದು, ಯಾರಿವರು ಫ್ರಾನ್ಸಿಸ್ ಹೌಗನ್?

ಅಮೆರಿಕದ ಹೌಗನ್, ಒಬ್ಬ ಡೇಟಾ ಎಂಜಿನಿಯರ್. ಫೇಸ್‌ಬುಕ್ ಕಂಪನಿಯಲ್ಲಿ ಆಕೆ ಎರಡು ವರ್ಷಗಳ ಕಾಲ ಉದ್ಯೋಗಿಯಾಗಿದ್ದು, ಕಳೆದ ಮೇ ತಿಂಗಳಿನಲ್ಲಿ ಸಂಸ್ಥೆಯಿಂದ ಹೊರಬಿದ್ದಿದ್ದಳು. ಫೇಸ್‌ಬುಕ್‌ನ ‘ನಾಗರಿಕ ಭದ್ರತೆ’ ವಿಭಾಗದಲ್ಲಿ ಪ್ರೊಡಕ್ಟ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಆಕೆ, ಸುಳ್ಳು ಮಾಹಿತಿ ಹರಡುವಿಕೆಯನ್ನು ಪತ್ತೆಹಚ್ಚುವ ಹೊಣೆ ನಿಭಾಯಿಸುತ್ತಿದ್ದಳು. ಫೇಸ್‌ಬುಕ್‌ನ ವೇದಿಕೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಭದ್ರಗೊಳಿಸದಂತೆ ನೋಡಿಕೊಳ್ಳುವ ಹೊಣೆ ಕೂಡ ಹೌಗನ್ ಕಾರ್ಯನಿರ್ವಹಿಸುತ್ತಿದ್ದ ವಿಭಾಗದ ಮೇಲಿತ್ತು.

ಹೌಗನ್‌ಗೆ ಈಗ 37ರ ಹರೆಯ. ಗೂಗಲ್, ಪಿಂಟೆರೆಸ್ಟ್, ಯೆಲ್ಪ್ ಕಂಪನಿಗಳಲ್ಲೂ ಆಕೆ ಕೆಲಸ ಮಾಡಿದ್ದಾಳೆ. ಹಾರ್ವರ್ಡ್ ಬ್ಯುಸಿನೆಸ್ ಸ್ಕೂಲ್‌ನಲ್ಲಿ ಮ್ಯಾನೇಜ್‌ಮೆಂಟ್ ಕೋರ್ಸ್‌ನಲ್ಲಿ ಪದವಿ ಪಡೆದಿರುವ ಆಕೆ, ಆನ್‌ಲೈನ್ ಡೇಟಿಂಗ್ ವೇದಿಕೆ ‘ಸೀಕ್ರೆಟ್ ಏಜೆಂಟ್ ಕ್ಯೂಪಿಡ್’ನ ಸಹಸ್ಥಾಪಕಿಯೂ ಹೌದು.

‘ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳು ಹರಡದಂತೆ ತಡೆಯುವುದು ನಾನು ಅತ್ಯಂತ ತೀವ್ರವಾಗಿ ಪ್ರೀತಿಸುವ ಕೆಲಸ’ ಎಂದೆನ್ನುವ ಆಕೆ, ಫೇಸ್‌ಬುಕ್ ಸೇರಿದ್ದು 2018ರಲ್ಲಿ. ಕಂಪನಿ ಸೇರುವಾಗ, ‘ಸುಳ್ಳು ಸುದ್ದಿ ಹರಡುವುದನ್ನು ತಡೆಯುವ ವಿಭಾಗದಲ್ಲೇ ಕೆಲಸ ಬೇಕು’ ಎಂದು ಕೇಳಿ ಪಡೆದಿದ್ದಳು. ಜಗತ್ತಿನಾದ್ಯಂತ ಚುನಾವಣೆಗಳು ನಡೆಯುವಾಗ ಹೌಗನ್ ಅವರಿದ್ದ ವಿಭಾಗವೇ ಫೇಸ್‌ಬುಕ್ ವೇದಿಕೆಗಳು ಹೇಗೆ ಬಳಕೆಯಾಗುತ್ತವೆ ಎಂಬುದರ ಮೇಲೆ ಕಣ್ಗಾವಲು ನಡೆಸಿತ್ತು. 2020ರಲ್ಲಿ ಅಮೆರಿಕದ ಅಧ್ಯಕ್ಷೀಯ ಚುನಾವಣೆ ಬಳಿಕ ಫೇಸ್‌ಬುಕ್, ಈ ವಿಭಾಗವನ್ನೇ ಬರ್ಖಾಸ್ತುಗೊಳಿಸಿತ್ತು.

‘ನಾಗರಿಕ ಭದ್ರತೆ’ ವಿಭಾಗ ಇಲ್ಲವಾದ ಬಳಿಕ ನಾನು ಫೇಸ್‌ಬುಕ್‌ನ ಮೇಲೆ ನಂಬಿಕೆ ಕಳೆದುಕೊಳ್ಳಲು ಆರಂಭಿಸಿದೆ. ಈ ವಿಭಾಗದ ಕೆಲಸಗಳನ್ನು ವಿವಿಧ ತಂಡಗಳಿಗೆ ಹಂಚಲಾಗಿದೆ ಎಂದು ಕಂಪನಿ ಮುಖ್ಯಸ್ಥರು ಹೇಳಿದರಾದರೂ ಸುಳ್ಳು ಸುದ್ದಿ ತಡೆಗೆ ಯಾವ ಕ್ರಮವನ್ನೂ ಅವರು ಕೈಗೊಂಡಿರಲಿಲ್ಲ’ ಎಂಬುದು ಹೌಗನ್ ನೀಡುವ ವಿವರಣೆ.

ಫೇಸ್‌ಬುಕ್‌ಗೆ ಯಾವುದು ಹಿತ ಮತ್ತು ಜನರಿಗೆ ಯಾವುದು ಹಿತ ಎನ್ನುವ ವಿಷಯದಲ್ಲಿ ಖಂಡಿತವಾಗಿಯೂ ಹಿತಾಸಕ್ತಿ ಸಂಘರ್ಷ ನಡೆಯುತ್ತಿದೆ. ಸಹಜವಾಗಿಯೇ ಕಂಪನಿಗೆ ಹೆಚ್ಚಿನ ಹಣ ತರುವ ಸ್ವಹಿತಾಸಕ್ತಿಯೇ ಅದಕ್ಕೆ ಮುಖ್ಯವಾಗಿದೆ ಎಂದು ಹೇಳಲೂ ಆಕೆ ಹಿಂಜರಿಯಲಿಲ್ಲ. ‘ದ್ವೇಷ ಹರಡದಂತೆ ತಡೆಯಲು ಸಾಕಷ್ಟು ಪ್ರಗತಿ ಸಾಧಿಸಲಾಗಿದೆಯೆಂದು ಸಾಮಾಜಿಕ ಜಾಲತಾಣಗಳು ಹೇಳುವುದೆಲ್ಲ ಬರಿ ಬೊಗಳೆ’ ಎಂದು ದಿಟ್ಟತನದಿಂದ ಆಕೆ ಹೇಳಿದ್ದಾಳೆ. ಅಧ್ಯಕ್ಷೀಯ ಚುನಾವಣೆ ಬಳಿಕ ಅಮೆರಿಕದಲ್ಲಿ ಗಲಭೆ ಹರಡಲು ಫೇಸ್‌ಬುಕ್ ವೇದಿಕೆಯಾಗಿದ್ದು ಸುಳ್ಳಲ್ಲ ಎಂಬುದು ಅವಳ ಸ್ಪಷ್ಟ ನುಡಿ. ಫೇಸ್‌ಬುಕ್ ವಿರುದ್ಧ ಕಾನೂನು ಸಮರಕ್ಕೂ ಹೌಗನ್ ಮುಂದಾಗಿದ್ದಾಳೆ.

ವ್ಯವಸ್ಥೆಯೊಳಗಿನ ‘ಹೌದಪ್ಪ’ಗಳ ವಿರುದ್ಧ ಹೀಗೆ ‘ವಿಷಲ್ ಬ್ಲೋವರ್’ಗಳೇನೋ ಆಗಾಗ ಹುಟ್ಟುತ್ತಲೇ ಇರುತ್ತಾರೆ. ಪ್ರವಾಹದ ವಿರುದ್ಧ ಹುಟ್ಟನ್ನೂ ಹಾಕುತ್ತಾರೆ. ಆದರೆ, ಸತ್ಯಸಂಗತಿ ಹೊರಬೀಳಲು ಪ್ರವಾಹದ ವಿರುದ್ಧ ಹೀಗೆ ಈಜಲು ಹೊರಟವರಿಗೆ ಜನ ಬೆಂಬಲವೂ ಅಗತ್ಯ ಎನ್ನುತ್ತಾಳೆ ಹೌಗನ್.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65